ದಿನಾಂಕಃ 12-08-2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ಸ್ವ ವರದಿಯನ್ನು ದಿ. 11.07.2015 ರಂದು ಸುಮಾರು ರಾತ್ರಿ 9.40 ಕ್ಕೆ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಮ್ಮ ವಸತಿ ನಿಲಯದಿಂದ ನ್ಯಾಯಾಲಯ ಸುಮಾರು 10, 15 ನಿಮಿಷಕ್ಕೆ ತಲುಪಬಹುದು ಎಂದರೆ ಸರಿ. ಕಾವೇರಿ ಮಹಿಳಾ ಕಾಲೇಜು ವಿರಾಜಪೇಟೆ ಅಕ್ಕಪಕ್ಕ ಮನೆಗಳು ಇವೆ ಎಂದರೆ ಸರಿ. ನಾವು ನೋಡಿದಾಗ ಟೆಂಪ್ಲೂ ವಾಹನ ಗೋಣಿಕೊಪ್ಪ ಕಡೆ ಮುಖ ಮಾಡಿತ್ತು. ನಮ್ಮ ವಾಹನ ನೋಡಿ 3 ಜನರ ಓಡಿ ಹೋಗಲು ಪ್ರಯತ್ನಿಸಿದರು ಯಾರು ಚಾಲಕ ಸೀಟಿನಲ್ಲಿ ಕುಳಿತಿದ್ದರು ಎಂದು ಗೊತ್ತಿಲ್ಲ. ಸದರಿಯವರು ಗೋಣಿಕೊಪ್ಪ ಕಡೆ ಓಡಲು ಪ್ರಯತ್ನಿಸಿದರು. ನಮ್ಮ ಸಿಬ್ಬಂದಿ ಅವರನ್ನು ಹಿಡಿದರು. ವಾಹನ ನಿಂತಿತ್ತು, ಕೀ ಗಾಡಿಯಲ್ಲಿತ್ತು. ಆರೋಪಿತರು ಹೇಳಿದ ಹೇಳಿಕೆಗಳನ್ನು ಸ್ಥಳದಲ್ಲಿ ತೆಗೆದುಕೊಳ್ಳಲಾಯಿತು. ವಾಹನದಲ್ಲಿ ಏನು ಇದೆ ವಿಚಾರಿಸಿದೆನು. ಅದೇ ದಿನ ಠಾಣೆ ಹೋಗಿ ಲಿಖಿತ ಹೇಳಿಕೆ ಪಡೆದಿರುತ್ತೇನೆ. ಮರುದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿ ಪೊಲೀಸ್ ಕಸ್ಟಡಿ ತೆಗೆದುಕೊಂಡು ತನಿಖಾದಿಕಾರಿ ವಿಚಾರಣೆ ಮಾಡಿರುತ್ತಾರೆ. ದಿ. 11.07.2015 ರಿಂದ 13.07.2015 ರ ತನರ ನಾನೇ ತನಿಖಾದಿಕಾರಿ ಎಂದರೆ ಸರಿ.

ಆರೋಪಿತರು ತಮ್ಮ ಹೇಳಿಕೆಯಲ್ಲಿ ಮೈಸೂರಿನ ಕಲಿಂ ಉಲ್ಲ ವಾಸೀಮ್ ಅಕ್ರಮ್ ಎನ್ನುವವರ ನಿರ್ದೇಶನದಂತೆ ಮರಗಳನ್ನು ಮದು ರವರ ತೋಟದಿಂದ ತಂದಿದ್ದೇವೆ ಎಂದು ಹೇಳಿದ್ದಾರೆ ಎಂದರೆ ಸರಿ. ನನ್ನ ತನಿಖೆಯಲ್ಲಿ ಆರೋಪಿತರು ವಾಸೀಮ್ ಅಕ್ರಮ್ ಎಂದು ಹೇಳಿಲ್ಲ ಎಂದರೆ ಸರಿ ಟೆಂಪ್ಲೂ ವಾಹನ ಅಮಾನತು ಪಡಿಸಿದಾಗ ಅಕ್ಕ ಪಕ್ಕದವರನ್ನು ಕರೆಯಲಿಲ್ಲ ಏಕೆಂದರೆ ರಾತ್ರಿ ಆಗಿತ್ತು ಎನ್ನುತ್ತಾರೆ. ಡಿ. ಎಫ್. ಓ ರವರಿಗೆ ತಕ್ಷಣ ಬಿ ಟಿ ಮರ ಸಿಕ್ಕಿರುವ ವಿಚಾರ ತಿಳಿಸಿಲ್ಲ ಎಂದರೆ ಸರಿ. ಮೇಲಾದಿಕಾರಿಗೂ ತಿಸಿಳಿದ ವಿಚಾರವನ್ನು ಮಹಾಜರ್ ನಲ್ಲಿ ನಮೂದಿಸಿಲ್ಲ ಎಂದರೆ ಅವಶ್ಯಕತೆ ಇಲ್ಲ ಎನ್ನುತ್ತಾರೆ. ನನ್ನ ತನಿಖಾದಿಕಾರಿಯಲ್ಲಿ ಹಿಚ್ಚಿ ನ ತನಿಖೆ ಹಾಗೂ ಸಾಕ್ಷಿ ದಾರರ ಹೇಳಿಕೆ ನಾನೇ ಮಾಡಿದ್ದೇನೆ ಎಂದರೆ ಸರಿ. ಕಾವೇರಿ ಕಾಲೇಜು ಬಳಿ ಮಾಡಿದ ಮಹಜಾರ್ ಸಾಕ್ಷಿದಾರರನ್ನು ಟಿ ಶೆಟ್ಟಿಗೇರಿಗೂ ಕರೆದುಕೊಂಡು ಹೋಗಿ ಮಹಾಜರು ಮಾಡಿದ್ದೇನೆ ಎಂದರೆ ಸರಿ. ಟಿ ಶೆಟ್ಟಿಗೇರಿ ಕಾಫಿ ತೋಟದ ಅಕ್ಕ ಪಕ್ಕ ಮನೆಗಳಿವೆ ಎಂದರೆ ದೂರದಲ್ಲಿವೆ ಎನ್ನುತ್ತಾರೆ. ಸದರಿ ಮನೆಗಳವನ್ನು ಮಹಾಜರ್ ಗೆ ಕರೆದಿಲ್ಲ ಅವರು ಲಭ್ಯವಿರಲಿಲ್ಲ ಎನ್ನುತ್ತಾರೆ. ಚೊಂದಿರಾ

ಮದು ರವರಿಗೆ ಸೇರಿದ ತೋಟದ ಬಗ್ಗೆ ದಾಖಲಾತಿ ಸಂಗ್ರಹಿಸಿಲ್ಲ ಎಂದರೆ ಸರಿ. ಮಹಾಜರ್ ಮಾಡುವಾಗ ಟಿ ಶೆಟ್ಟಿಗೇರಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಯಿತು ಎಂದರೆ ಸರಿ. ನಾನು ಸಂಬಂಧಪಟ್ಟ ಪೊಲೀಸ್ ಠಾಣೆಯವರನ್ನು ಮಹಾಜರ್ ಗೆ ಕರೆದಿಲ್ಲ ಎಂದರೆ ಅವಶ್ಯಕತೆ ಇಲ್ಲ ಎನ್ನುತ್ತಾರೆ.

ನಿ ಪಿ 3 ಮತ್ತು 4 ನ್ನು ಪಿ. ಎಫ್ ನ್ನು ಮಾತ್ರ ನ್ಯಾಯಾಲಯಕ್ಕೆ ನೀಡಿದ್ದೇನೆ ಮಹಾಜರ್ ನ್ನು ನಾನು ನೀಡಿಲ್ಲ. ನಾನು ಕಡತವನ್ನು ವರ್ಗಾಯಿಸುವ ತನಕ ನನ್ನ ಬಳಿಕ ಇತ್ತು ಎನ್ನುತ್ತಾರೆ. ಪ್ರಕರಣದ ಸಂಖ್ಯೆಯನ್ನು ಮರದ ತುಂಡಗುಳ ಮೇಲೆ ಬರೆದಿಲ್ಲ ಎಂದರೆ ಸರಿ. ಕ್ರಮ ಸಂಖ್ಯೆಯನ್ನು ಹಳದಿ ಬಣ್ಣದಿಂದ ಬರೆಯಲಾಯಿತು. ಟೆಂಪೂ ಗೆ ಕ್ರಮ ಸಂಖ್ಯೆ ನೀಡಿಲ್ಲ ಮರಗಳಿಗೆ ಮಾತ್ರ ನೀಡಲಾಯಿತು ಮರದ ಕುತ್ತಿಗೂ ಸಹ ಕ್ರಮ ಸಂಖ್ಯೆ ನೀಡಿಲ್ಲ. ಮರಗಳನ್ನು ಟೆಂಪೂ ಗೆ ತುಂಬಿಸಲು ಹಗ್ಗ ಹಾಗೂ ಸಲಕಾರಣೆಗಳು ಬೇಕು ಎಂದರೆ ಹಾಗೆ ಮನಷ್ಯರೇ ತುಂಬಿಸಬಹುದು ಎನ್ನುತ್ತಾರೆ. ಟೆಂಪೂ ದಲ್ಲಿ ಚಾಲಕ ಹಾಗೂ ಕ್ಲೀನರ್ ಕೂರುವ ಸ್ಥಳ ಹೊರತು ಪಡಿಸಿ ಬೇರೆ ಖಾಲಿ ಇತ್ತು. ಟೆಂಪೂದಲ್ಲಿ ಮರದಲ್ಲಿ ಒಂದರ ಮೇಲೆ ಒಂದು ಇತ್ತು. ಟೆಂಪೂದಿಂದ ಮರಗಳನ್ನು ಇಳಿಸಿ ಆನಂತರ ಕ್ರಮ ಸಂಖ್ಯೆ ನೀಡಿರುತ್ತೇನೆ, ಮರಗಳನ್ನು ಇಳಿಸಿದ ಕಾರ್ಮಿಕರ ಸಹಿ ಪಡೆಯಲಿಲ್ಲ. ಮರಗಳನ್ನು ಇಳಿಸಿ ಅಳತೆ ಮಾಡಲು ಕ್ರಮ ಸಂಖ್ಯೆ ನೀಡಲು ಸಮಯ 2 ಗಂಟೆ ಬೇಕಾಯಿತು.

ಆರೋಪಿತರು ಟೆಂಪೂ ಗೆ ಮರಗಳನ್ನು ತುಂಬಿಸಿ ತರಲು ಸಮಯ 2 ಗಂಟೆ ಅವಶ್ಯಕತೆ ಇದೆ ಎಂದರೆ ಅದು ಅವರ ದೈಹಿಕ ಶಕ್ತಿ ಮೇಲೆ ಅವಲಂಬಿತವಾಗಿದೆ ಎನ್ನುತ್ತಾರೆ. ಮಹಾಜರ್ ಸಹಿ ಮಾಡಿರುವ ಮಹಿಳಾ ಕಾಲೇಜಿನಿಂದ ಸುಮಾರು 5, 6 ಕಿ. ಮೀ ದೂರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ತೋಟದಲ್ಲಿ ಬೇರೆ ಮರದ ತುಂಡುಗಳು ಇರಲಿಲ್ಲ ಆದರ ಕುರುಹು ಇತ್ತು ಎನ್ನುತ್ತಾರೆ. ಸದರಿ ಮರದ ರೆಂಬೆ ಕೊಂಬೆಗಳನ್ನು ಅಮಾನತುಪಡಿಸಿಲ್ಲ ಎಂದರೆ ಸರಿ. ನಿ ಪಿ 4 ರ ಸ್ಥಳ ಚೊಂದಿರಾ ಮದುರವರಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಟೆಂಪೂ ಯಾವುದೇ ಬೀಟೆ ಮರಗಳನ್ನು ಅಮಾನತು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮರಗಳು ಸ್ವಲ್ಪ ಹಸಿ ಇತ್ತು ಎನ್ನುತ್ತಾರೆ. ನಾವು ಹೇಳಿದಂತೆ ತೋಟಕ್ಕೆ ಹೋಗಿಲ್ಲ ಹಾಗೂ ಸದರಿ ಮರಗಳು ಆರೋಪಿ 1 ರವರದ್ದಲ್ಲ ಎಂದರೆ ಸರಿಯಲ್ಲ. ಬೀಟೆ ಹಾಗೂ ಟೆಂಪೂ ವಾಹನವನ್ನು ಅಮಾನತು ಪಡಿಸಿದ ಬಗ್ಗೆ ದಿ. 12.07.2015 ರಂದು ಸಕ್ಷಮ ಅಧಿಕಾರಿಗೆ ವರದಿ ಮಾಡಿದ್ದೇನೆ ಎನ್ನುತ್ತಾರೆ.

ಮರುವಿಚಾರಣೆ ಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/-
ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಪೊನ್ನಂಪೇಟೆ.

(ಸಾಕ್ಷಿಯ ಸಹಿ)